Karnataka Housing Board

# ಕರ್ನಾಟಕ ಗೃಹ ಮಂಡಳಿ

ಸಂಖ್ಯೆ:ಕಗೃಮಂ/ಕಾಅ/ಸಕಾಅ/ಬಂ.ಯೋ.ವಿ/ಕೆಂಗೇರಿ/ /2020-2021, ದಿನಾಂಕ:11-06-2020

## ಸಾರ್ವಜನಿಕ ಹರಾಜು ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಬೆಂಗಳೂರಿನ ಕೆಂಗೇರಿ ಬಂಡೇಮಠ ಬಡಾವಣೆಯಲ್ಲಿ ಲಭ್ಯವಿರುವ ಮೂಲೆ ನಿವೇಶನಗಳನ್ನು ಸಾರ್ವಜನಿಕ ಸಮಕ್ಷಮ "ಬಹಿರಂಗ ಹರಾಜು" ಮೂಲಕ "ಹೇಗಿದೆಯೋ ಹಾಗೆ" (As is where is basis) ವಿಲೇವಾರಿ ಮಾಡಲು ಉದ್ದೇಶಿಸಲಾಗಿದೆ. ಹರಾಜು ಮಾಡಲು ಉದ್ದೇಶಿಸಿರುವ ಮೂಲೆ ನಿವೇಶನಗಳ ಸಂಖ್ಯೆ, ಅಳತೆ ಮತ್ತು ವಿಸ್ತೀರ್ಣ ಇತ್ಯಾದಿ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

| | |
|---|---|
| ಹರಾಜು ನಡೆಯುವ ಸ್ಥಳ & ದಿನಾಂಕ | ಕೆಂಗೇರಿ ಬಂಡೇಮಠ ಯೋಜನಾ ಕಛೇರಿ,<br>ಪ್ಲಾಟಿನಂ ಬಹುಮಹಡಿ ವಸತಿ ಸಮುಚ್ಛಯ,<br>ಶಿರ್ಕೆ ಎದುರು, ಕೆಂಗೇರಿ ಉಪನಗರ, ಬೆಂಗಳೂರು<br>ದಿನಾಂಕ: 26/06/2020 ಬೆಳಿಗ್ಗೆ 11-00 ಗಂಟೆಗೆ. |

| ಕ್ರ. ಸಂ | ವರ್ಗ | ಮೂಲೆ ನಿವೇಶನ ಸಂಖ್ಯೆ | ಅಳತೆ (ಮೀಟರ್‌ಗಳಲ್ಲಿ) | ವಿಸ್ತೀರ್ಣ (ಚ.ಮೀ. ಗಳಲ್ಲಿ) | ವಿಸ್ತೀರ್ಣ (ಚದರಡಿ ಗಳಲ್ಲಿ) | ಮಂಡಳಿಯ ಕನಿಷ್ಠ ಬೆಲೆ |
|---|---|---|---|---|---|---|
| 1 | LIG | 56 | (10.00+10.4)/2X(18.00+15.00)/2 | 168.30 | 1811.58 | ಪ್ರತಿ ಚ.ಮೀ. ಗೆ (ರೂ.43,040/-) |
| 2 | LIG | 141 | (11.8+14.00)/2 x(18.7+8)/2 | 172.21 | 1853.66 | |
| 3 | LIG | 204 | (15.00+12.00)/2 X 15.00 | 202.50 | 2179.71 | |
| 4 | LIG | 205 | (14.50+11.50)/2 X(7.2+15.2)/2 | 145.60 | 1567.23 | |
| 5 | LIG | 228 | 12.00 X (7.8+9.5)/2 | 103.80 | 1117.30 | |
| 6 | LIG | 287 | 12.00 X (8.00+5.1)/2 | 78.60 | 846.05 | |
| 7 | LIG | 307 | 11.70 X(12.00+7.5)/2 | 114.07 | 1227.84 | |
| 8 | LIG | 327 | 12.40 X(7.00+8.3)/2 | 94.86 | 1021.07 | |
| 9 | LIG | 334 | 12.00 X 7.00 | 84.00 | 904.17 | |
| 10 | LIG | 341 | 12.00 X7.00 | 84.00 | 904.17 | |
| 11 | MIG | 33 | 15.00 X (11.40+12.40)/2 | 178.50 | 1921.37 | |
| 12 | MIG | 43 | 15.00 X 9.00 | 135.00 | 1453.14 | |
| 13 | MIG | 63 | 15.00 X (12.5+15.00)/2 | 206.25 | 2219.25 | |
| 14 | MIG | 82 | 15.00 X 7.30 | 109.50 | 1178.66 | |
| 15 | Press (HIG) | 1/P | 18.00 X 12.00 | 216.00 | 2325.02 | ಪ್ರತಿ ಚದರಡಿಗೆ (ರೂ.4,000/-) |
| 16 | Press (HIG) | 12/P | 18.00 X 12.00 | 216.00 | 2325.02 | |
| 17 | HIG-I | 108 | 17.30 X 15.20 | 262.96 | 2830.50 | |
| 18 | HIG-II | 52 | 15.00 X 24.00 | 360.00 | 3875.04 | |
| 19 | HIG-II | 55 | 15.00 X 24.00 | 360.00 | 3875.04 | |
| 20 | HIG-II | 56 | 15.00 X 24.00 | 360.00 | 3875.04 | |

**ಷರತ್ತು ಮತ್ತು ನಿಬಂಧನೆಗಳು:-**

1) ಎಲ್ಲಾ ಸ್ವತ್ತುಗಳು "ಹೇಗಿದೆಯೋ ಹಾಗೆ" (AS IS WHERE IS BASIS) ಆಧಾರದ ಮೇಲೆ ಹರಾಜು ಮಾಡಲಾಗುವುದು, ಹರಾಜಿನ ಸ್ವತ್ತುಗಳನ್ನು ಮುಂಚಿತವಾಗಿ ನೋಡಬಹುದು.

2) ಹರಾಜಿನಲ್ಲಿ ಭಾಗವಹಿಸುವವರು ಪ್ರತಿ ನಿವೇಶನಕ್ಕೆ ರೂ.50,000/-(ಐವತ್ತು ಸಾವಿರ ರೂ) ಮುಂಗಡ ಠೇವಣಿಯಾಗಿ ಹರಾಜಿನಲ್ಲಿ ಭಾಗವಹಿಸುವುದಕ್ಕಿಂತ ಮುಂಚಿತವಾಗಿ ಹರಾಜು ನಡೆಯುವ ಸ್ಥಳದಲ್ಲಿ **ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು** ಇವರ ಹೆಸರಿನಲ್ಲಿ ಡಿ.ಡಿ. ಅಥವಾ ನಗದಾಗಿ ಸಲ್ಲಿಸಬೇಕು. ಹರಾಜಿನಲ್ಲಿ ಯಶಸ್ವಿಯಾಗದ ಬಿಡ್ಡುದಾರರಿಗೆ ಸ್ಥಳದಲ್ಲಿಯೇ ಅವರು ಪಾವತಿಸಿದ ಠೇವಣಿ ಹಣವನ್ನು ಹರಾಜು ಮುಗಿದ ನಂತರ



Scanned with CamScanner

ಹಿಂತಿರುಗಿಸಲಾಗುವುದು. ಹರಾಜು ಸಮಯ 11.00 ಗಂಟೆಗಿಂತ ಮುಂಚಿತವಾಗಿ ಸಾಲಿನಲ್ಲಿ ನಿಂತಿದ್ದರೆ, ಸಾಲಿನಲ್ಲಿ ಹಿಂದೆ ಇರುವವರಿಂದ ಕ್ರಮಸಂಖ್ಯೆ ನಮೂದಿಸಿ, ಚೀಟಿ ನೀಡಿ, ಅಂತಹವರಿಗೆ ಟೋಕನ್ ನೀಡಿ ಹರಾಜಿಗೆ ಭಾಗವಹಿಸಲು ಅವಕಾಶ ಮಾಡಿಕೊಡಲಾಗುವುದು.

3) ಹರಾಜಿನಲ್ಲಿ ಭಾಗವಹಿಸಲು ಟೋಕನ್‌ಗಳನ್ನು ಬೆಳಿಗ್ಗೆ 10.00 ಕ್ಕೆ ವಿತರಿಸಲಾಗುವುದು. ಹರಾಜು ಪ್ರಾರಂಭವಾದ ನಂತರ ಬಂದ ಹರಾಜುದಾರರ ಭಾಗವಹಿಸುವಿಕೆಯನ್ನು ತಿರಸ್ಕರಿಸಲಾಗುವುದು.

4) ಯಶಸ್ವಿ ಬಿಡ್ಡುದಾರರು ಶೇ.25ರಷ್ಟು ಮೊತ್ತವನ್ನು ಹರಾಜು ಮಾಡಿದ 72 ಗಂಟೆಯ ಒಳಗಾಗಿ (ಸಾರ್ವತ್ರಿಕ ರಜಾ ದಿನ ಹೊರತುಪಡಿಸಿ) ಬ್ಯಾಂಕಿನ ಅವಧಿಯೊಳಗೆ ಪಾವತಿ ಮಾಡತಕ್ಕದ್ದು, ಪಾವತಿ ಮಾಡದಿದ್ದಲ್ಲಿ ಯಾವುದೇ ಮುನ್ಸೂಚನೆ ನೀಡದೇ ಮುಂಗಡ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಇತ್ತೀಚಿನ ಎರಡು (02) ಬಣ್ಣದ ಭಾವಚಿತ್ರ ಹಾಗೂ ವಿಳಾಸ ದೃಢೀಕರಣದ ದಾಖಲೆಯನ್ನು ಸಂಬಂಧಿಸಿದ ಸ.ಕಾ.ಅ. ರವರಿಗೆ ನೀಡತಕ್ಕದ್ದು.

5) ಹರಾಜಿನಲ್ಲಿ ಯಾರ ಹೆಸರಿಗೆ ಟೋಕನ್ ಪಡೆದು ಬಿಡ್‌ನಲ್ಲಿ ಭಾಗವಹಿಸುತ್ತಾರೋ, ಅವರ ಹೆಸರಿಗೆ ಮಾತ್ರ ಹರಾಜು ದೃಢೀಕರಣ ಹಂಚಿಕೆ ಪತ್ರ ನೀಡಲಾಗುವುದು. ಹರಾಜು ದೃಢೀಕರಣ ಪತ್ರ ಪಡೆದ 60 ದಿನಗಳ ಒಳಗಾಗಿ ಉಳಿದ ಶೇಕಡ 75% ರಷ್ಟು ಬಾಕಿ ಮೊತ್ತವನ್ನು ಪಾವತಿಸತಕ್ಕದ್ದು. ನಿಗದಿತ ಅವಧಿಯೊಳಗೆ ಪಾವತಿ ಮಾಡದೇ ಇದ್ದಲ್ಲಿ ಬಿಡ್ಡುದಾರರು ಮಂಡಳಿಗೆ ಸಂದಾಯ ಮಾಡಿರುವ ಶೇಕಡ 25% ರಷ್ಟು ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

6) ಯಶಸ್ವಿ ಬಿಡ್ಡುದಾರರು ತಮ್ಮ ಸ್ವಂತ ಖರ್ಚಿನಲ್ಲಿ ನೋಂದಣಿ ಮಾಡಿಸಿಕೊಳ್ಳುವುದು ಹಾಗೂ ಬಿಡ್ ಮೊತ್ತವನ್ನು RTGS/NEFT ಮೂಲಕ ಪಾವತಿಸಿದಲ್ಲಿ ತಮ್ಮ ಖಾತೆಯಿಂದಲೇ ಪಾವತಿ ಮಾಡಬೇಕು. ಅದರ ಮಾಹಿತಿಯನ್ನು ಕೂಡಲೇ ಕಚೇರಿಗೆ ನೀಡತಕ್ಕದ್ದು.

7) ಪ್ರಕಟಿತ ಸ್ವತ್ತುಗಳ ಸಂಖ್ಯೆಯು ಬದಲಾವಣೆಗೆ ಒಳಪಟ್ಟಿರುತ್ತದೆ.

8) ಪ್ರಕಟಿತ ಸ್ವತ್ತುಗಳ ಅಳತೆ ಮತ್ತು ವಿಸ್ತೀರ್ಣದಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ನಿಖರವಾದ ಅಳತೆ ಮತ್ತು ವಿಸ್ತೀರ್ಣಕ್ಕೆ ಅನುಗುಣವಾಗಿ ಬಿಡ್ ದರವು ಒಳಪಟ್ಟಿರುತ್ತದೆ

9) ಒಂದು ಸ್ವತ್ತಿಗೆ ಒಬ್ಬರೇ ಬಿಡ್ಡುದಾರರು ಬಿಡ್ ಮಾಡಿದ್ದಲ್ಲಿ ಅಂತಹ (Single bidder) ಬಿಡ್ಡನ್ನು ತಿರಸ್ಕರಿಸಲಾಗುವುದು.

10) ಪ್ರಕಟಿತ ಸ್ವತ್ತುಗಳನ್ನು ಹರಾಜು ಮಾಡುವ ಅಥವಾ ಯಾವುದೇ ಮುನ್ಸೂಚನೆ ನೀಡದೆ ರದ್ದುಮಾಡುವ ಹಾಗೂ ಬಿಡ್ಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕರ್ನಾಟಕ ಗೃಹ ಮಂಡಳಿಯು ಕಾಯ್ದಿರಿಸಿಕೊಂಡಿರುತ್ತದೆ.

11) ಕೋವಿಡ್-19 ಗೆ ಸಂಬಂದಿಸಿದಂತೆ ಸರ್ಕಾರದ ಅಧಿಸೂಚನೆ ಅನುಸಾರ ಹರಾಜಿನಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಸರ್ಕಾರದ ನಿಯಮಗಳನ್ನು ಪಾಲಿಸಲು ಸೂಚಿಸಿದೆ.

ಕೆಂಗೇರಿ ಬಂಡೇಮಠ ಬಡಾವಣೆಯ ಸ್ವತ್ತುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರ ಮೊಬೈಲ್ ಸಂಖ್ಯೆ: 9448266499 ಶ್ರೀ ಚಂದ್ರಶೇಖರ್. ಕೆ. ಮೊಬೈಲ್ ಸಂಖ್ಯೆ: 9449237352 ಮತ್ತು ಶ್ರೀ. ಕೆ. ಶ್ರೀನಿವಾಸ್ ಮೊಬೈಲ್ ಸಂಖ್ಯೆ: 9483447979 ರಲ್ಲಿ ಮಾಹಿತಿ ಪಡೆಯಬಹುದಾಗಿದೆ. ಹಾಗೂ ವೆಬ್‌ಸೈಟ್ www.karnatakahousing.com ಯಿಂದ ಮಾಹಿತಿ ಪಡೆಯಬಹುದು ಮತ್ತು ಸಂಬಂದಿಸಿದ ಯೋಜನಾ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು.

ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ,
ಬಂಡೇಮಠ ಯೋಜನಾ ವಿಭಾಗ,
ಕೆಂಗೇರಿ, ಬೆಂಗಳೂರು.

ಪ್ರತಿಯನ್ನು:-

1)ಉಪ ಪ್ರಧಾನ ವ್ಯವಸ್ಥಾಪಕರು (ಗ್ರಾ.ಸೇ) ಕಗೃಮಂ, ಕಾವೇರಿ ಭವನ, ಬೆಂಗಳೂರು ಇವರ ಮಾಹಿತಿಗಾಗಿ ಹಾಗೂ ಹರಾಜು ಕಾರ್ಯಕ್ಕೆ ತಮ್ಮ ಅಧಿಕಾರಿ / ಸಿಬ್ಬಂದಿಯನ್ನು ನಿಯೋಜಿಸಲು ಕೋರಲಾಗಿದೆ.

2)ಸಿಸ್ಟಂ ಅನಾಲಿಸ್ಟ್, ಕಗೃಮಂ, ಕಾವೇರಿ ಭವನ, ಬೆಂಗಳೂರು, ಇವರಿಗೆ ಕಳುಹಿಸುತ್ತಾ ಪ್ರಕಟಣೆಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಲಾಗಿದೆ.

ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ,
ಬಂಡೇಮಠ ಯೋಜನಾ ವಿಭಾಗ,
ಕೆಂಗೇರಿ, ಬೆಂಗಳೂರು.

Scanned with CamScanner